## ಇರುಳು.....!

ಕಡುನೀಲಿ ಗಗನದ
ಸುಂದರ ಚೆಲುವು..
ಕಾಣಲು ಬಂದಿಹ
ಮಿನುಗುತಾರೆಯರ ಒಲವು!

ಇರುಳಿನ ಸನ್ನಾಟದೊಳು
ಬೆಳದಿಂಗಳ ಹಾಸುತ್ತ..
ನಡೆದಿಹ ಚಂದಿರನು
ನಸುನಗೆ ಚೆಲ್ಲುತ್ತ!

ಪಕ್ಷಿಸಂಕುಲವು ರೆಕ್ಕೆಪುಕ್ಕಗಳ
ಬಡಿಯುತ್ತ , ಮರಗಿಡಗಳ
ನಡುವಿನಲಿ ನಿದ್ರಿಸಿ ಹಾರಿದ್ದವು
ಕನಸಿನ ಲೋಕದತ್ತ..!

ಝರಿಯ ಕಾಲುವೆಯೊಂದು
ಹೊಳೆಯುತ್ತ ಬೆಳ್ಳಿಯಂತೆ
ಜುಳುಜುಳು ತವಕದಲಿ
ಸಾಗುತ್ತಿತ್ತು ವೈಯ್ಯಾರಿಯಂತೆ!

ಇರುಳು ಉರುಳುತ್ತಾ
ಮೆಲ್ಲನೆ ಮುಸುಕಿನೊಳಗಿಂದ
ಇಣುಕಿ ಹೊಸಬೆಳಕಿನ
ಆಗಮನಕೆ ಕಾಯುತ್ತಿತ್ತು!

● **ವಿಜಯಲಕ್ಷ್ಮೀ. ಎಸ್**

## ವಿರಕ್ತಿ

ಭೂಮಿಯ ಮೇಲೆ ಶಾಶ್ವತವಲ್ಲ ಈ ದೇಹ
ಮತ್ತೇಕೆ ನಾನು ನನ್ನದೆಂಬ ವ್ಯಾಮೋಹ
ಮನದಲಿ ತಣಿಯಲಿ ಅಂತರಂಗದ ದಾಹ
ಬಿಡಬೇಕು ಲೌಕಿಕ ವಸ್ತುಗಳ ಮೋಹ

ಪರಿಶುದ್ಧವಾಗಿರಲಿ ದೇವರಲ್ಲಿ ಭಕ್ತಿ
ಕಷ್ಟವ ಎದುರಿಸಲು ನೀಡುವನು ಶಕ್ತಿ
ಪ್ರೀತಿಯು ಹೆಚ್ಚಿಸುವುದು ಜೀವನದ ಆಸಕ್ತಿ
ಬಾಳಿನಲ್ಲಿರಬೇಕು ಸಾಮಾನ್ಯ ಅರಿವಿನ ಭುಕ್ತಿ

ಭಕ್ತಿಮಾರ್ಗದಿ ನಡೆದರೆ ಸಿಗುವುದು ಮುಕ್ತಿ
ಮನುಜನಲ್ಲಿ ಹೆಚ್ಚಾಗುತ್ತಿದೆ ಕುಯುಕ್ತಿ
ಅನುಭವದ ಜ್ಞಾನವೇ ನೀಡುವುದು ನಿಜವಾದ ವಿರಕ್ತಿ
ಕೆಲಸ ಕಾರ್ಯದಲ್ಲಿರಲಿ ಅನವರತ ಅನುರಕ್ತಿ

● **ಚೇತನ ಭಾರ್ಗವ**

## ಒಳ್ಳೆಯ ದಿನಗಳು ಬರ್ತಾವಂತೆ!

ನಾಳೆ ಬಂದೇ ಬರ್ತಾರಂತೆ
ಬಣ್ಣದ ಅಂಗಿ ಕೊಡ್ತಾರಂತೆ
ಪುಸ್ತಕ-ಪಾಟಿ-ಊಟ ಕೂಡ
ಮೇಡಂ ಇಲ್ಲಿಗೇ ತರ್ತಾರಂತೆ!


ಟೆಂಟ್ ಶಾಲೆ ತೆರೀತಾರಂತೆ
ನಮಗೂ ಅಕ್ಷರ ಕಲಿಸ್ತಾರಂತೆ
ಹಾಡು-ಕಥೆ ಹೇಳ್ಕೊಡ್ಲಿಕ್ಕೇಂತ
ಮೇಡಂ ಇಲ್ಲಿಗೇ ಬರ್ತಾರಂತೆ!

ಭಿಕ್ಷೆ ಬೇಡೋ ಹಂಗಿಲ್ವಂತೆ
ಬಿಸಿ ಬಿಸಿ ಊಟ ಬಡಿಸ್ತಾರಂತೆ
ಟೂರ್ ಕರ್ಕೊಂಡ್ ಹೋಗ್ತಾರಂತೆ
ಮೇಡಂ ನಂಜೊತೆ ಇರ್ತಾರಂತೆ!

ಒಳ್ಳೆಯ ದಿನಗಳು ಬರ್ತಾವಂತೆ
ಪದ - ಕೆಲಸ ಸಿಗ್ತಾವಂತೆ
ದೊಡ್ಡ ಮುನುಷ್ಯರೇ ಆಗ್ತೀವಂತೆ
ಮೇಡಂ ಹಾಗೆ ಹರಸ್ತಾರಂತೆ!

● **ಬೇದ್ರೆ, ಮಂಜುನಾಥ, ಮೈಸೂರು**

## ಕಾರ್ಟೂನ್




ಹೆಂಗಸರಿಗೆ ಬಸ್ "ಉಚಿತ"..ನಮಗೆ ಮನರಂಜನೆ ಉಚಿತ.. ಅಲ್ವೇ ..!!!

● **ಎಚ್.ಎಸ್. ವಿಶ್ವನಾಥ್**

## ನಗೆ ಹನಿ

ಗಣಿತದ ಮೇಷ್ಟ್ರು: ನಿಮ್ಮಪ್ಪನ ಹತ್ತಿರ ಇರೋ 10,000ರೂ.ಯಲ್ಲಿ, ನಿನಗೆ 6,000 ಕೊಟ್ಟರೆ, ಅವರ ಬಳಿ ಎಷ್ಟು ಉಳಿದಿರತ್ತೋ ?
ಕಿಟ್ಟು: ಹತ್ತು ಸಾವಿರ ಸಾರ್!
ಗಣಿತದ ಮೇಷ್ಟ್ರು: ಅದ್ಹೇಗೋ?
ಕಿಟ್ಟು : ನಮ್ಮಪ್ಪನ ಬಗ್ಗೆ ನಿಮಗೆ ಗೊತ್ತಿಲ್ಲ ಸಾರ್, ಒಂದು ನಯಾಪೈಸೆ ಕೊಡಲ್ಲ.

● **ವಿ.ವಿಜಯೇಂದ್ರ ರಾವ್**

## ತಲೇತಿಮ್ಮ



**ಕ್ಲಿಕ್ ಆಫ್ ದ ಡೇ**



ಕಡಲ ಕಿನಾರೆಯಲ್ಲಿ ಮತ್ಸ್ಯ ಕನ್ಯೆ ಚಿತ್ರದಲ್ಲಿರುವವರು; ಆಮಿ ಜೋಸೆಫ್

# ಒಂದು ಚಕ್ರದ ಕತೆ

● **ವಿ.ಎಸ್.ಕಳಸೇಶ್ವರ, ಬೆಂಗಳೂರು**

ನಮ್ಮ ತಲೆಮಾರಿನ ಅಂದರೆ ಸುಮಾರು 60-70 ಆಸುಪಾಸಿನ ವಯೋಮಾನದ ಮಧ್ಯಮ ವರ್ಗದವರು ಸಾಧಾರಣವಾಗಿ ಬಾಲ್ಯದಲ್ಲಿ ಅಲ್ಪತೃಪ್ತರಾಗಿ, ಮಿತವ್ಯಯಿಗಳಾಗಿ ಬೇಕುಗಳಿಗೆ ಬ್ರೇಕು ಹಾಕುತ್ತ ಬೆಳೆದು ಬಂದವರಾಗಿರುತ್ತೇವೆ. ಈ ನಿಟ್ಟಿನಲ್ಲಿ ನನ್ನ ನೆನಪಿನ ಆಳವನ್ನು ಕೆದಕಿದಾಗ ನಾನು ಏಳನೆಯ ತರಗತಿಯಲ್ಲಿದ್ದಾಗ ನಡೆದ ಒಂದು ಪ್ರಸಂಗ ತೇಲಿಬಂತು.



ನಮ್ಮ ಕಾಲದಲ್ಲಿ ಹುಡುಗರು ದಾರಿಯುದ್ದಕ್ಕೂ ಹಳೆಯ ಟೈರಿನ ಚಕ್ರವನ್ನು ಉರುಳಿಸುತ್ತಾ ಅದರ ಹಿಂದೆ ಓಡುವುದು, ಸಾಮಾನ್ಯ ದೃಶ್ಯವಾಗಿತ್ತು. ಇಳಿಜಾರಿನ ದಾರಿಯಲ್ಲಿ ನಮ್ಮ ನಡಿಗೆಯ ವೇಗಕ್ಕೆ ಸಮನಾಗಿ ಚಕ್ರದ ವೇಗವನ್ನು ನಿಯಂತ್ರಿಸುವುದು ಹಾಗೂ ಏರುದಾರಿಯಲ್ಲಿ ಕೆಳಗೆ ಬೀಳದಂತೆ ಓಡಿಸುವುದು ಈ ಆಟದ ಒಂದು ಭಾಗ.

ನಮ್ಮ ಶಾಲೆಯ ಮುಂದೆ ವಿಶಾಲವಾದ ಆಟದ ಮೈದಾನವಿತ್ತು. ಅಲ್ಲಿಈ ರೀತಿ ಚಕ್ರ ಓಡಿಸುತ್ತಿದ್ದ ಅನೇಕ ಸಹಪಾಠಿಗಳನ್ನು ನೋಡಿದಾಗಲೆಲ್ಲ ನನ್ನ ಹತ್ತಿರವೂ ಇಂತಹ ಒಂದು ಚಕ್ರವಿದ್ದಿದ್ದರೆ, ಆಗಾಗ ಮನೆಯಿಂದ ಪೇಟೆಯ ಕಡೆ ಹೋಗಿ ಬರುವಾಗ ಚಕ್ರ ಉರುಳಿಸುತ್ತಾ ಹೋಗಿಬರುವುದು ಎಷ್ಟು ಚೆನ್ನಾಗಿರುತ್ತದೆ ಎಂದು ಕನಸು ಕಾಣತೊಡಗಿದೆ. ಆದರೆ ಆಗಿನ ಕಾಲದಲ್ಲಿ ಅತ್ಯವಶ್ಯಕ ವಸ್ತುಗಳಿಗೇ ದುಡ್ಡು ಕೇಳುವ ಮುನ್ನ ಹತ್ತು ಬಾರಿ ಯೋಚಿಸುವ ಸ್ಥಿತಿಯಿದ್ದಾಗ ಇಂತಹ ಉದ್ದೇಶಗಳಿಗೆ ದುಡ್ಡನ್ನು ಕೇಳುವ ಮನಸ್ಥಿತಿಯಲ್ಲಿರಲಿಲ್ಲ.

### ಕನಸು ನನಸಾದಾಗ..


ದಿನನಿತ್ಯ ಇಂತಹ ಚಕ್ರ ಓಡಿಸುತ್ತಿದ್ದ ನನ್ನ ಸಹಪಾಠಿ ಮಿತ್ರನೊಬ್ಬನಲ್ಲಿ ನನಗೂ ಒಂದು ಚಕ್ರ ತಂದುಕೊಡುವಂತೆ ಕೇಳಿದೆ. ಆತ ನನ್ನ ಬೇಡಿಕೆಗೆ ಸ್ಪಂದಿಸಿ ಒಂದು ಚಕ್ರ ಮತ್ತು ಅದನ್ನು ಓಡಿಸುವ ಕೋಲನ್ನು ಶಾಲೆಯ ಸಮೀಪಕ್ಕೆ ತಂದುಕೊಟ್ಟ. ಅದನ್ನು ತನ್ನ ಪಾಕೆಟ್ ಹಣದಿಂದ ಖರೀದಿಸಿ ಕೊಟ್ಟನೋ ಅಥವಾ ಹಳೇ ಟೈರ್ ಅಂಗಡಿಯಿಂದ ಉಚಿತವಾಗಿ ಪಡೆದು ತಂದನೋ ನನಗೆ ನೆನಪಿಲ್ಲ. ಅದನ್ನು ನೋಡುತ್ತಿದ್ದಂತೆಯೇ ಒಂದು ಮಹದಾಸೆ ನೆರವೇರಿಂದ ಸಂತೋಷ ಸಂತೃಪ್ತಭಾವ ನನ್ನದಾಯಿತು. ಆದರೆ ಅದನ್ನು ಎಲ್ಲಿ ಇಟ್ಟುಕೊಳ್ಳುವುದು ಎಂಬ ದೊಡ್ಡ ಸಮಸ್ಯೆ ಎದುರಾಯಿತು. ಮನೆಗೆ ತೆಗೆದುಕೊಂಡು ಹೋಗೋಣವೆಂದರೆ, ಯಾರು ಕೊಟ್ಟರು, ಯಾಕೆ ಕೊಟ್ಟರು ಇತ್ಯಾದಿ ಪ್ರಶ್ನಿಸಿ ಒಂದು ವೇಳೆ ವಾಪಸ್ ಕೊಡು ಎಂದರೆ ಎಂಬ ಅಳುಕು. ಆದ್ದರಿಂದ ಕಾಡಿನ ದಾರಿಯಲ್ಲಿ ಮನೆಯ ಸಮೀಪ ಒಂದು ಮರದ ಬುಡದಲ್ಲಿ (ಪಾಂಡವರು ಅಜ್ಞಾತ ವಾಸದ ಸಮಯದಲ್ಲಿ ಶಸ್ತ್ರಗಳನ್ನು ಅಡಗಿಸಿಟ್ಟಂತೆ) ಮುಚ್ಚಿಟ್ಟು ಮೇಲೆ ತರಗೆಲೆ ಹರಡಿ ಮನೆಗೆ ಬಂದೆ.

### ಅದೇ ಗುಂಗು!

ಅಂದು ರಾತ್ರಿಯೆಲ್ಲ ಅದೇ ಗುಂಗು, ಮರುದಿನ ಭಾನುವಾರ ಶಾಲೆಗೆ ರಜೆ. ಬೆಳಿಗ್ಗೆ ಪೇಟೆಯಿಂದ ಸಾಮಾನು ತರಲು ಕಳಿಸಿದಾಗ ಹುಮ್ಮಸ್ಸಿನಿಂದ ಸಾಮಾನಿನ ಪಟ್ಟಿ, ಕೈಚೀಲದೊಂದಿಗೆ ಹೊರಟೆ. ಹಿಂದಿನ ದಿನ ಅಡಿಗಿಸಿಟ್ಟಲ್ಲಿಂದ ಚಕ್ರ ತೆಗೆದು ಟಾರು ರಸ್ತೆಯಲ್ಲಿ ಓಡಿಸಿ ಮತ್ತೆ ಅಲ್ಲೇ ಮುಚ್ಚಿ ಇಟ್ಟು ಬರುವ ಯೋಚನೆ ನನ್ನದಾಗಿತ್ತು. ಚಕ್ರವು ಮರದ ಬುಡದಲ್ಲೇ ಸುರಕ್ಷಿತವಾಗಿತ್ತು. ಕಾಡಿನ ಕಾಲುದಾರಿಯಲ್ಲಿ ಉರುಳಿಸುವುದು ಕಷ್ಟವೆನಿಸಿದರೂ ಹೇಗೋ ತಂದು ಕಾಡಿನಿಂದ ಟಾರು ರಸ್ತೆಗಿಳಿಸಿ ಏರುದಾರಿಯಲ್ಲಿ ಬಹಳ ಉತ್ಸಾಹದಿಂದ ಅಂಕುಡೊಂಕಾದ ರಸ್ತೆಯ ಮೇಲೆ ಸುಮಾರು ಒಂದೆರಡು ಫರ್ಲಾಂಗು ಓಡಿಸಿರಬಹುದು.

ದೂರದ ತಿರುವಿನಲ್ಲಿ ನಮ್ಮ ಶಾಲೆಯ ಹೆಡ್ ಮಾಸ್ಟರ್ ಕರಿಯಪ್ಪನವರು ನಡೆದು ಬರುತ್ತಿರುವುದು ಕಾಣಿಸಿತು. ಅವರು ನನ್ನ ಮೆಚ್ಚಿನ ಉಪಾಧ್ಯಾಯರು, ನಾನು ಅವರ ಹೆಮ್ಮೆಯ ವಿದ್ಯಾರ್ಥಿ. ಆದರೆ ಪರೀಕ್ಷೆ ಸಮೀಪಿಸುತ್ತಿರುವಾಗ ರಸ್ತೆಯ ಮೇಲೆ ಚಕ್ರ ಓಡಿಸುತ್ತಿರುವುದನ್ನು ನೋಡಿದರೆ ಅವರೇನೆಂದು ಕೊಂಡಾರು ಎಂಬ ಭಯದಲ್ಲಿ ಕೈಯಲ್ಲಿದ್ದ ಕೋಲನ್ನೂ ಚಕ್ರವನ್ನೂ ಅಲ್ಲೇ ಬಿಟ್ಟು ಮುಂದೆ ಹೆಜ್ಜೆ ಹಾಕಿದೆ. ಅವರು ಸಮೀಪಿಸಿದಾಗ ನಮಸ್ಕರಿಸಿದೆ. ಯೋಗಕ್ಷೇಮ ವಿಚಾರಿಸಿದರು. ಹಿಂತಿರುಗಿ ನೋಡದೆ ಮುಂದುವರಿದೆ. ಪೇಟೆ ಕೆಲಸಗಳನ್ನೆಲ್ಲ ಮುಗಿಸಿಕೊಂಡು ಅದೇ ದಾರಿಯಲ್ಲಿ ಹಿಂತಿರುಗಿದೆ. ನಾನು ಬಿಟ್ಟಿದ್ದ ಜಾಗದಲ್ಲಿ ಚಕ್ರ ಇರಲಿಲ್ಲ. ಅಲ್ಲಿಗೆ, ಚಕ್ರದ (ಹಂಬಲದ) ಕಥೆ ಮುಕ್ತಾಯವಾಯಿತು.

# ನಂಬಿಕೆ-ಅಪನಂಬಿಕೆಯ ನಡುವೆ



● **ಚೇತನ ಭಾರ್ಗವ**

ಈ ಜಗತ್ತು ಹಾಗೂ ಮನುಷ್ಯರ ನಡುವಿನ ಸಂಬಂಧಗಳು ನಿಂತಿರುವುದೇ ನಂಬಿಕೆಯ ಭದ್ರವಾದ ಬುನಾದಿಯ ಮೇಲೆ. ಈ ನಂಬಿಕೆ ಮತ್ತು ಅಪನಂಬಿಕೆಯ ಮಧ್ಯದಲ್ಲಿ ಕೂದಲ ಎಳೆಯ ಅಂತರವಿರುತ್ತದೆ. ನಮಗೆ ವ್ಯಕ್ತಿಯ ಮೇಲೆ ವಿಶ್ವಾಸವಿದ್ದರೆ ಆತನನ್ನು ನಂಬುತ್ತೇವೆ. ಒಂದು ಬಾರಿ ಅವನ ಮೇಲೆ ಅನುಮಾನ ಶುರುವಾದರೆ ಅಪನಂಬಿಕೆಯ ಹುತ್ತ ಬೆಳೆಯುತ್ತಾ ಹೋಗುತ್ತದೆ. ಒಂದು ಸಣ್ಣ ಅನುಮಾನವು ನಂಬಿಕೆಯನ್ನು ಸಂಪೂರ್ಣವಾಗಿ ನುಂಗಿ ಹಾಕುತ್ತದೆ. ಹಾಗಾಗಿಯೇ ಹಿರಿಯರು ಅನುಮಾನಂ ಪೆದ್ದರೋಗಂ ಎಂದು ಹೇಳಿರುವುದು.

ಅನುಮಾನವೆಂಬ ಹುಳ ಒಮ್ಮೆ ಮನಸ್ಸಿನಲ್ಲಿ ಹೊಕ್ಕಿದರೆ ಸಾಕು ಅದು ಸಂಪೂರ್ಣವಾಗಿ ಜೀವನದ ನೆಮ್ಮದಿಯನ್ನೇ ಹಾಳು ಮಾಡಿಬಿಡುತ್ತದೆ.

ಅಪನಂಬಿಕೆ ಹಾಗೂ ಅನುಮಾನವೆಂಬ ಗೆದ್ದಲು ಹುಳ ಒಮ್ಮೆ ನಂಬಿಕೆಎಂಬ ಹೆಮ್ಮರವನ್ನು ಕೊರೆಯಲು ಶುರು ಮಾಡಿದರೆ ಅದು ಇಡೀ ಮರವನ್ನೇ ಟೊಳ್ಳು ಮಾಡಿ ಉರುಳಿ ಬೀಳಿಸುತ್ತದೆ. ನಂಬಿಕೆಯನ್ನು ಒಂದು ಬಾರಿ ಕಳೆದುಕೊಂಡರೆ ಮತ್ತೆ ಗಳಿಸುವುದು ಬಲು ಕಷ್ಟ ಆದರೆ ಅಪನಂಬಿಕೆ ಅವಕಾಶ ಸಿಕ್ಕಾಗೆಲ್ಲ ಅಣಬೆಯ ರೀತಿ ಮನಸ್ಸಿನಲ್ಲಿ ಹುಟ್ಟುತ್ತಾ ಇರುತ್ತದೆ. ನಂಬಿಕೆ ಬೇಗ ಸಾಯುತ್ತದೆ ಆದರೆ ಅಪನಂಬಿಕೆ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತದೆ.

ನಂಬಿಕೆ ಎಂಬುದು ಮನಸ್ಸಿಗೆ ಸಂಬಂಧಿಸಿದ ವಿಷಯ ನಂಬಿಕೆಯಿಂದಲೇ ಜೀವನವು ಸಾಗುತ್ತಾ ಇರುವುದು. ಬಸ್ಸಿನಲ್ಲಿ ಪ್ರಯಾಣಿಸುವಾಗ ಚಾಲಕ ಸರಿಯಾದ ನಿಲ್ದಾಣ ಕ್ಕೆ ನಮ್ಮನ್ನು ತಲುಪಿಸುತ್ತಾನೆ ಎಂಬ ನಂಬಿಕೆಯ ಮೇಲೆಯೇ ಬಸ್ಸನ್ನು ಹತ್ತುತ್ತೇವೆ. ಪ್ರತಿಯೊಂದು ಕೆಲಸ ಮಾಡಬೇಕಾದರೂ ನಂಬಿಕೆ ಬಹಳ ಮುಖ್ಯವಾಗುತ್ತದೆ. ನಂಬಿಕೆ ಒಂದು ರೀತಿ ಕನ್ನಡಿ ಇದ್ದ ಹಾಗೆ ಒಂದು ಬಾರಿ ಕನ್ನಡಿ ಒಡೆದು ಹೋದರೆ ಅದನ್ನು ಜೋಡಿಸಲು ಹೇಗೆ ಸಾಧ್ಯವಾಗುವುದಿಲ್ಲವೋ ಅದೇ ರೀತಿ, ವ್ಯಕ್ತಿಯೊಬ್ಬ ಒಂದು ಬಾರಿ ನಂಬಿಕೆಯನ್ನು ಕಳೆದುಕೊಂಡರೆ, ಮತ್ತೆ ಆ ವ್ಯಕ್ತಿಯನ್ನು ನಂಬಲು ಮನಸ್ಸು ನಿರಾಕರಿಸುತ್ತದೆ. ಆ ವ್ಯಕ್ತಿಯು ನಂಬಿಕೆಗೆ ಅರ್ಹನಾಗಿದ್ದರೂ ಆತನನ್ನು ಅಪನಂಬಿಕೆಯಿಂದಲೇ ನೋಡುವ ಪರಿಸ್ಥಿತಿ ಎದುರಾಗುತ್ತದೆ. ಅವನ ಮೇಲಿನ ಅಭಿಪ್ರಾಯ ಸುಲಭವಾಗಿ ಬದಲಾಗುವುದಿಲ್ಲ.

ನಂಬಿಕೆಯೇ ದೇವರು. ದೇವರನ್ನು ಭಕ್ತಿ ಭಾವದಿಂದ ಪೂಜಿಸಿದರೆ ನಮ್ಮ ಕಷ್ಟಕಾರ್ಪಣ್ಯಗಳನ್ನ ಬಗೆಹರಿಸುತ್ತಾನೆ ಎಂದು ನಾವು ಬಲವಾಗಿ ನಂಬುತ್ತೇವೆ. ಹೀಗೆ ಉತ್ತಮವಾದ ನಂಬಿಕೆ ಇರಬೇಕಾದರೆ ಒಳ್ಳೆಯ ಸಂಸ್ಕಾರದ ಅಗತ್ಯವಿದೆ. ಅಪನಂಬಿಕೆಯ ಮೋಡ ಸರಿದಾಗ ಮಾತ್ರ ನಂಬಿಕೆಯ ಕಿರಣ ಹೊರಹೊಮ್ಮಿ ಬಾಳು ಬೆಳಗಲು ಸಾಧ್ಯವಾಗುತ್ತದೆ. ನಂಬಿಕೆಯು ನಿರಾಳ, ಅಪನಂಬಿಕೆಯು ಕರಾಳ.

# ಜೋಗ್ 101ನಲ್ಲಿ ನವರಸಗಳ ನರ್ತನ



ಕೇಸ್ ಆಫ್ ಕೊಂಡಾಣದ ರಹಸ್ಯ ಭೇಧಿಸಿದ ವಿಜಯ್ ರಾಘವೇಂದ್ರ, ಜೋಗದ ದರ್ಶನ ಮಾಡಿಸುತ್ತಿದ್ದಾರೆ. ಜೋಗ್‌ಗೆ ತೆರಳಿ, ಅಲ್ಲಿ ಯಾರಿಗೂ ತಿಳಿಯದ ಕುತೂಹಲಕರ ವಿಚಾರಗಳನ್ನು ಭೇಧಿಸಿದ್ದಾರೆ. ಅಷ್ಟಕ್ಕೂ ಏನಿದು ಜೋಗ್ 101 ಎಂಬುದರ ಕುರಿತಂತೆ ನಿರ್ದೇಶಕ ವಿಜಯ್ ಕನ್ನಡಿಗ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

**ವಿ.ಸಿನಿಮಾಸ್ : ಜೋಗ್ 101 ಶೀರ್ಷಿಕೆಯೇ ವಿಭಿನ್ನವಾಗಿದೆಯಲ್ಲಾ ?**

**ವಿಜಯ್ :** ಜೋಗ್101 ಎನ್ನುವುದು ಒಂದು ಕೋಡ್ ವರ್ಡ್, ಸಿನಿಮಾದಲ್ಲಿ ಅದು ಡಿಕೋಡ್ ಆಗಲಿದೆ. ಜೋಗ ಜಲಪಾತ ನೋಡುವುದೇ ಚೆಂದ. ಆ ರಮಣೀಯ ಸೌಂದರ್ಯದಲ್ಲಿ ಅಲ್ಲಿ ನಡೆದ ಹಲವು ವಿಚಾರಗಳು ಯಾರಿಗೂ ತಿಳಿಯುವುದೇ ಇಲ್ಲ. ಅಂತಹ ನಿಗೂಢ ವಿಚಾರಗಳನ್ನು ಈ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ. ಜೋಗ್‌ನಲ್ಲಿ ನಡೆದ ನೈಜ ಘಟನೆಗಳನ್ನು ಆಧರಿಸಿ ಚಿತ್ರದ ಕಥೆ ಹೆಣೆದಿದ್ದೇವೆ. ಜೋಗ್‌ನಲ್ಲಿಯೇ ಆರಂಭವಾಗುವ ಕಥೆ ಅಲ್ಲಿಯೇ ಅಂತ್ಯವಾಗುತ್ತದೆ.

**ವಿ.ಸಿ: ಜೋಗ್ ಕೂಡ ಪತ್ತೆಧಾರಿ ಕಥೆಯ ಸಿನಿಮಾವೇ ?**

**ವಿಜಯ್ :** ಇಲ್ಲ, ಜೋಗ್ 101ನಲ್ಲಿ ನವರಸಗಳು ಬೆರೆತಿವೆ. ಲವ್, ಸೆಂಟಿಮೆಂಟ್, ಸಸ್ಪೆನ್ಸ್, ಥ್ರಿಲ್ಲರ್, ಕಾಮಿಡಿ ಹೀಗೆ ಎಲ್ಲಾ ಅಂಶಗಳು ಇವೆ. ನಾಯಕ ಕಾಣೆಯಾದ ತನ್ನ ಸ್ನೇಹಿತರನ್ನು ಅರಸುತ್ತಾ ಜೋಗ್‌ಗೆ ಬರುತ್ತಾನೆ. ಅಲ್ಲಿ ಹುಡುಕಾಟ ನಡೆಸುತ್ತಿರುವಾಗ ಹಲವು ನಿಗೂಢ ವಿಚಾರಗಳು ತೆರೆದುಕೊಳ್ಳುತ್ತವೆ. ಅದನ್ನು ಕುತೂಹಲಭರಿತವಾಗಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದೇವೆ.

**ವಿ.ಸಿ: ವಿಜಯ್ ರಾಘವೇಂದ್ರ, ಅವರನ್ನೇ ಚಿತ್ರಕ್ಕೆ ಆಯ್ಕೆಮಾಡಲು ಕಾರಣ?**

**ವಿಜಯ್:** ಮೊದಲೇ ಹೇಳಿದಂತೆ ಚಿತ್ರದಲ್ಲಿ ನವರಸಗಳು ತುಂಬಿವೆ. ಕಥೆಗೆ ತಕ್ಕಂತೆ ಇದೆಲ್ಲವನ್ನು ನಿಭಾಯಿಸಲು ವಿಜಯ್ ರಾಘವೇಂದ್ರ, ಅವರೇ ಸೂಕ್ತ ಎಂಬುದು ಮನದಟ್ಟಾಗಿತ್ತು. ಅವರೂ ಕೂಡ ಕಥೆ ಕೇಳಿ ನಟಿಸಲು ಒಪ್ಪಿದರು. ವಿಕ್ರಮ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ.

> **ನಮ್ಮ ಚಿತ್ರದಲ್ಲಿ ಜೋಗ ಜಲಪಾತವನ್ನು ಡ್ರೋಣ್ ಕ್ಯಾಮೆರಾ ಬಳಸಿ ಸುಂದರವಾಗಿ ಸೆರೆಹಿಡಿದಿದ್ದೇವೆ. ಪ್ರೇಕ್ಷಕರಿಗೆ ಜಲಪಾತ ಹೊಸ ಸೊಬಗಿನಿಂದ ಕಂಗೊಳಿಸುತ್ತದೆ. ಸಿನಿಮಾ ನೋಡಿದ ಮೇಲೆ ಜೋಗ ಜಲಪಾತಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಲಿದೆ.**

**ವಿ.ಸಿ: ಹಾಡುಗಳು ಸದ್ದು ಮಾಡುತ್ತಿವೆಯಲ್ಲಾ?**

**ವಿಜಯ್ :** ಹೌದು, ಹಾಡುಗಳೇ ನಮ್ಮ ಚಿತ್ರಕ್ಕೆ ಜೀವತುಂಬಿವೆ. ವಿ.ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯದ ಮುಂಜಾನೆ... ಹಾಡು ಹಿಟ್ ಆಗಿದೆ. ರಘು ದೀಕ್ಷಿತ್ ಗಾಯನಕ್ಕೆ ಸಂಗೀತ ಪ್ರಿಯರು ಫಿದಾ ಆಗಿದ್ದಾರೆ. ಅಂತೆಯೇ ಜಯಂತ್ ಕಾಯ್ಕಿಣಿ ಸಾಹಿತ್ಯದ ಹಾಡು ಸಂಚಿತ್ ಹೆಗಡೆ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ.

# ಅಪ್ಪು ಹುಟ್ಟುಹಬ್ಬಕ್ಕೆ ರತ್ನ ಟ್ರೇಲರ್

ಬಸವರಾಜ್ ಬಳ್ಳಾರಿ ನಿರ್ಮಿಸಿ, ನಿರ್ದೇಶಿಸಿರುವ ರತ್ನ ಚಿತ್ರದ ಟ್ರೇಲರ್ ಅಪ್ಪು ಹುಟ್ಟುಹಬ್ಬದಂದು ರಿಲೀಸ್ ಆಗಲಿದೆ. ರತ್ನ ಅಪ್ಪು ಅಭಿಮಾನಿಗಳ ಸುತ್ತ ಸಾಗುವ ಕಥೆಯನ್ನು ಒಳಗೊಂಡಿದೆ. ಚಿತ್ರದ ನಾಯಕಿ ಪುನೀತ್ ರಾಜಕುಮಾರ್ ಅವರ ಅಭಿಮಾನಿಯಾಗಿರುತ್ತಾಳೆ. ಆಕೆಯ ಅಭಿಮಾನ ಎಂತಹದ್ದು ಎಂಬುದನ್ನು ಈ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ. ಸೆಂಟಿಮೆಂಟ್‌ನಲ್ಲಿಯೇ ಚಿತ್ರ ಗಮನಸೆಳೆಯಲಿದೆ.

ಹರ್ಷಲಾ ಹನಿ ನಾಯಕಿಯಾಗಿ ನಟಿಸಿದ್ದಾರೆ. ಉಳಿದಂತೆ ವರ್ಧನ್, ಆನಂದ್ ಅಪ್ಪು, ಬಾಲರಾಜ್ ಒಡೆಯರ್, ನಾಗೇಂದ್ರ ಅರಸ್, ಅಮಿತ್ ರಾವ್, ಸಾರಿಕಮ್ಮ, ರಾಣಿ ಬಸವರಾಜ್, ಸುಚಿತ್ ಚೌವ್ಹಾಣ್, ರಾಮು ಕರೂರ್, ಮಂಜು ದೈವಜ್ಞ ಮುಂತಾದವರು ರತ್ನ ಚಿತ್ರದ ತಾರಾಬಳಗದಲ್ಲಿದ್ದಾರೆ. ನಿರ್ದೇಶಕ ಬಸವರಾಜ್ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶಿಸಿದ್ದಾರೆ. ಸತೀಶ್ ಬಾಬು ಸಂಗೀತ ನಿರ್ದೇಶನ, ಸತೀಶ್ ಗಂಗಾವತಿ ಛಾಯಾಗ್ರಹಣ ಹಾಗೂ ನಾಗೇಂದ್ರ ಅರಸ್ ಸಂಕಲನ ಈ ಚಿತ್ರಕ್ಕಿದೆ. ರತ್ನ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು ಪ್ರಮಾಣಪತ್ರ ನೀಡಿದೆ. ಏಪ್ರಿಲ್‌ನಲ್ಲಿ ಚಿತ್ರ ತೆರೆಗೆ ಬರಲಿದೆ.

